ಕಾರಂಜಾ ನೀರಾವರಿ ಯೋಜನೆಯನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಕೈಗೊಂಡಿರುವ ಕ್ರಮಗಳು

3292 - ಶ್ರೀ ಪ್ರಕಾಶ ಖಂಡ್ರೆ (ಬಾಲ್ಕಿ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಕಾರಂಜಾ ನೀರಾವರಿ ಯೋಜನೆಯನ್ನು ಎರಡು ವರ್ಷಗಳೊಳಗೆ ಪೂರ್ಣಗೊಳಿಸಲು ನಿರ್ಧರಿಸಿರುವುದು ನಿಜವೆ ?*

ಆ) *ಹಾಗಿದ್ದಲ್ಲಿ ಈ ಯೋಜನೆಯನ್ನು ನಿಗದಿತ ಅವಧಿಯಲ್ಲಿ (2 ವರ್ಷಗಳಲ್ಲಿ) ಪೂರ್ಣಗೊಳಿಸಲು ಸರ್ಕಾರ ಟೈಂ ಬಾಂಡ್ ಕಾರ್ಯಕ್ರಮವನ್ನು ರೂಪಿಸಿದೆಯೇ ?*

ಇ) *ಹಾಗಿದ್ದಲ್ಲಿ ಈ ಕಾರ್ಯಕ್ರಮದ ವಿವರಗಳೇನು ? ಈ ಯೋಜನೆಯನ್ನು ನಿಗಧಿತ ಅವಧಿಯಲ್ಲಿ ಮುಕ್ತಾಯಗೊಳಿಸಲು ಇನ್ನೂ ಎಷ್ಟು ಹಣದ ಅಗತ್ಯವಿದೆ. ಕಳೆದ ಒಂದು ವರ್ಷದಲ್ಲಿ ಇದಕ್ಕಾಗಿ ವೆಚ್ಚ ಮಾಡಲಾಗಿರುವ ಹಣದ ಮೊತ್ತವೆಷ್ಟು ? ಈಗ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ?*

ಈ) *ಈ ಯೋಜನೆಯ ಪ್ರಾರಂಭದಲ್ಲಿ ಎಷ್ಟು ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವ ಗುರಿಯನ್ನು ಹೊಂದಲಾಗಿತ್ತು. ಈಗ ಈ ಯೋಜನೆ ನಿಧಾನಗತಿಯಲ್ಲಿ ಸಾಗುತ್ತಿದ್ದು ಪೂರ್ಣಗೊಂಡ ನಂತರ ಎಷ್ಟು ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆಯುವುದು ?*

ಶ್ರೀ ಎಚ್.ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ಮಾರ್ಚ್ 2002ರ ವರೆಗೆ ಈ ಯೋಜನೆಯನ್ನು ಪೂರ್ಣಗೊಳಿಸಲು ಯೋಜಿಸಲಾಗಿದೆ.

ಆ) ಹೌದು.

ಇ) **ಕಾರ್ಯಕ್ರಮದ ವಿವರ**

ವರ್ಷ	*ಆರ್ಥಿಕ ಕಾರ್ಯಕ್ರಮ*
1. 2000-01	ರೂ. 33.00 ಕೋಟಿ
2. 2001-02	ರೂ. 102,80 ಕೋಟಿ

ಭೌತಿಕ ಕಾರ್ಯಕ್ರಮ

1. **2000-01** : ಎಡದಂಡೆ ಕಾಲುವೆ ಮತ್ತು ವಿತರಣಾ ಕಾಲುವೆ ಪೂರ್ಣಗೊಳಿಸುವುದು ಬಲದಂಡೆ ಕಾಲುವೆ 79 ಕಿ.ಮೀ. ರಿಂದ 100ರ ವರೆಗೆ ವಿತರಣಾ ಕಾಲುವೆ ಸಹಿತ ಪೂರ್ಣಗೊಳಿಸುವುದು. ಮುಂದಂಡೆ ಏತ ನೀರಾವರಿ ಕಾಲುವೆ 5 ಕಿ.ಮೀ. ರಿಂದ 10

ಕಿ.ಮೀ. ವರೆಗೆ ವಿತರಣಾ ಕಾಲುವೆ ಸಹಿತವಾಗಿ ಪೂರ್ಣಗೊಳಿಸುವುದು. ಉಳಿದ ಪುನರ್ವಸತಿ ಕಾಮಗಾರಿಗಳು ಪೂರ್ಣಗೊಳಿಸುವುದು.

2. **2001 ರಿಂದ 2002**: ಬಲದಂಡೆ ಕಾಲುವೆ 101 ಕಿ.ಮೀ. ರಿಂದ 131 ಕಿ.ಮಿ. ವರೆಗೆ ವಿತರಣಾ ಕಾಲುವೆ ಸಹಿತ ಪೂರ್ಣಗೊಳಿಸುವುದು. ಜಲಾಶಯದ ಮುಂದಂಡೆ ಏತ ನೀರಾವರಿ ಕಾಲುವೆ ಕಿ.ಮೀ. 11 ರಿಂದ ಕಿ.ಮೀ. 24ರ ವರೆಗೆ ವಿತರಣಾ ಕಾಲುವೆ ಸಹಿತ ಪೂರ್ಣಗೊಳಿಸುವುದು, ಹಾಗೂ ಉಳಿದ ಪುನರ್ವಸತಿ ಕಾಮಗಾರಿಗಳು ಪೂರ್ಣಗೊಳಿಸುವುದು.

ಕಳೆದ ಒಂದು ವರ್ಷದಲ್ಲಿ (1999-2000) ಆದ ವೆಚ್ಚ 35.26 ಕೋಟಿ ರೂ.ಗಳು 2000-01ರಲ್ಲಿ ಬಿಡುಗಡೆಯಾದ ಹಣ 9:2000ರವರೆಗೆ 17.98 ಕೋಟಿ ರೂ.ಗಳು ಯೋಜನೆ ಮುಕ್ತಾಯಗೊಳಿಸಲು ಇನ್ನೂ 118 ಕೋಟಿ ರೂ.ಗಳು ಬೇಕಾಗುತ್ತದೆ.

ಈ) ಈ ಯೋಜನೆಯ ಪ್ರಾರಂಭದಲ್ಲಿ ಮೂಲ ಅಂದಾಜಿನ ಪ್ರಕಾರ ಒಟ್ಟು 67.000 ಎಕರೆ (27113.00 ಹೆಕ್ಟೇರ್) ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸುವ ಗುರಿಯನ್ನು ಹೊಂದಲಾಗಿತ್ತು. ಈಗ ಮುಂದಂಡೆ ಏತ ನೀರಾವರಿಯನ್ನೊಳಗೊಂಡಂತೆ ಯೋಜನೆ ಪೂರ್ಣಗೊಂಡ ನಂತರ ಒಟ್ಟು 88,000 ಎಕರೆ (3516 ಹೆಕ್ಟೇರ್) ನೀರಾವರಿ ಸೌಲಭ್ಯ ದೊರೆಯುವುದು.

ಸರ್ಕಾರಿ ಸ್ವಾಮ್ಯದ ರೋಗಗ್ರಸ್ಥ ಕೈಗಾರಿಕೆಗಳ ಪುನಶ್ಚೇತನ ಕಾರ್ಯಕ್ರಮ

3293 - ಶ್ರೀ ರಾಮಲಿಂಗಾರೆಡ್ಡಿ ಎಂ.ಎಲ್.ಎ (ಜಯನಗರ) : ಮಾನ್ಯ ಮುಖ್ಯಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಸ್ವಾಮ್ಯದ ಯಾವ ಯಾವ ಕೈಗಾರಿಕೆಗಳು ರೋಗಗ್ರಸ್ತ ಕೈಗಾರಿಕೆಗಳೆಂದು ಗುರುತಿಸಲಾಗಿದೆ?

ಆ) ಇವುಗಳಲ್ಲಿ ಇದುವರೆಗೆ ಆಗಿರತಕ್ಕ ನಷ್ಟವೆಷ್ಟು?

ಇ) ಈ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಲು ಸರ್ಕಾರ ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಕರ್ನಾಟಕ ರಾಜ್ಯ ಉದ್ದಿಮೆಗಳಲ್ಲಿ 9 ಕಂಪನಿಗಳು ರೋಗಗ್ರಸ್ತವೆಂತಲೂ ಅಥವಾ ಬಿಐಎಫ್ಆರ್‌ಗೆ ಕಳುಹಿಸಲು ನಿರ್ಧರಿಸಲಾಗಿದೆ. ಇದಲ್ಲದೆ ಇನ್ನು 9 ಸಾರ್ವಜನಿಕ ಉದ್ದಿಮೆಗಳನ್ನು ಋಣ ವಿಮೋಚಿಸುವುದರಲ್ಲಿ ಪರಿಶೀಲನೆಯಲ್ಲಿದೆ. ನಷ್ಟ ವಿವರಗಳನ್ನು 31.3.99ಗೆ ಕೆಳಕಂಡಂತೆ ನೀಡಿದೆ.